# ಇದು **ಜೀಬ್ಲಿ** ಕಾಲವಯ್ಯಾ...

■ **ಶಶಿಕುಮಾರ್ ಸಿ.**

ಒಂದು ಕಾಲದಲ್ಲಿ ಅನಿಮೇಷನ್ ಪ್ರಿಯರಿಗೆ 'ಜೀಬ್ಲಿ' ಕೇವಲ ಕಲೆಯಾಗಿರಲಿಲ್ಲ. ಅದೊಂದು ಭಾವನೆಯಾಗಿತ್ತು. ಕಲ್ಪನಾ ಜಗತ್ತಿಗೆ ಕರೆದೊಯ್ಯುವ ವೇದಿಕೆಯಾಗಿತ್ತು. ಜನರ ಮನದೊಡನೆ ಬೆಸೆದಿದ್ದ ಕೈಬರಹದ ಅನಿಮೇಷನ್ ವಿಧಾನವಾದ ಜೀಬ್ಲಿಯು ಕಾರಣಾಂತರಗಳಿಂದ ನಿಂತುಹೋಗಿತ್ತು. ಆದರೀಗ, ಇದಕ್ಕೆ ಚಾಟ್‌ಜಿಪಿಟಿಯು ಡಿಜಿಟಲ್ ಸ್ಪರ್ಶ ನೀಡಿ, ಮತ್ತೆ ಮುನ್ನೆಲೆಗೆ ತಂದಿದೆ.

'ಕೃತಕ ಬುದ್ಧಿಮತ್ತೆ'ಯಲ್ಲಿ (ಎಐ) ಮುಂಚೂಣಿಯಲ್ಲಿರುವ ಓಪನ್‌ಎಐ ಕಂಪನಿಯು ಈಚೆಗೆ ಇಮೇಜ್ ಜನರೇಷನ್ ಮಾಡೆಲ್ 'ಜಿಪಿಟಿ 4ಒ' (GPT 4o) ಪರಿಚಯಿಸಿತ್ತು. ಸ್ಟುಡಿಯೊ ಜೀಬ್ಲಿ ಮಾದರಿಯ ಚಿತ್ರಗಳನ್ನು ರಚಿಸಲು ಇದು ಮುಖ್ಯ ವೇದಿಕೆಯಾಗಿದೆ. ಬಿಡುಗಡೆಯಾದ ಒಂದೇ ದಿನದಲ್ಲಿ ಟೆಕ್ ಲೋಕದ ಟ್ರೆಂಡ್‌ಗೆ ಕಾರಣವಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಜೀಬ್ಲಿ ಮಾದರಿಯ ಚಿತ್ರಗಳು ತುಂಬಿ ತುಳುಕುತ್ತಿವೆ.

ಎಐ ಬಳಸಿಕೊಂಡು ಚಿತ್ರಗಳ ಅನಿಮೇಟೆಡ್ ಆವೃತ್ತಿಗಳನ್ನು ರಚಿಸುವ ಡಿಜಿಟಲ್ ವಿಧಾನವೇ ಈ ಜೀಬ್ಲಿ. ಚಾಟ್‌ಜಿಪಿಟಿಯಲ್ಲಿ ಸರಳವಾಗಿ ಪಠ್ಯ ಆಧರಿತ ಪ್ರಾಂಪ್ಟ್‌ನೊಂದಿಗೆ ತಮ್ಮದೇ ಆದ ಎಐ ರಚಿತ ಚಿತ್ರಗಳನ್ನು ಜೀಬ್ಲಿ ರೂಪದಲ್ಲಿ ರಚಿಸಬಹುದು. ಜೊತೆಗೆ ನಿಮ್ಮದೇ ಕೆಲ ಫೋಟೊಗಳನ್ನು ಚಾಟ್‌ಜಿಪಿಟಿಗೆ ಅಪ್‌ಲೋಡ್ ಮಾಡಿ ಅವುಗಳನ್ನು ಜೀಬ್ಲಿಯಾಗಿ ಪರಿವರ್ತಿಸಲು ಕೋರಬಹುದು. ನಿಮ್ಮ ಬೇಡಿಕೆಗೆ ಅನುಗುಣವಾಗಿ ಚಿತ್ರಗಳು ರಚನೆಗೊಳ್ಳುತ್ತವೆ.

ಓಪನ್‌ಎಐನ ಈ ಫೀಚರ್ ಚಾಟ್‌ಜಿಪಿಟಿ ಪ್ಲಸ್, ಪ್ರೊ, ಟೀಮ್ ಮತ್ತು ಆಯ್ದ ಚಂದಾದಾರಿಕೆ ಶ್ರೇಣಿಗಳಿಗೆ ಪ್ರತ್ಯೇಕವಾಗಿ ಲಭ್ಯವಾಗಲಿದೆ. ಎಐ ರಚಿತ ಚಿತ್ರಗಳಿಗೆ ಇರುವ ಅಗಾಧ ಬೇಡಿಕೆಯನ್ವಯ ಉಚಿತವಾಗಿ ಈ ಸೌಲಭ್ಯವನ್ನು ಪರಿಚಯಿಸಲಾಗಿದೆ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಯಾಮ್ ಆಲ್ಟ್‌ಮನ್ ಹೇಳಿದ್ದಾರೆ. ಇದೊಂದು ಅದ್ಭುತ ತಂತ್ರಜ್ಞಾನ ಮತ್ತು ಉತ್ಪನ್ನ ಎಂದವರು ಬಣ್ಣಿಸಿದ್ದಾರೆ.

ಬಳಕೆದಾರರಿಗೆ ತಮ್ಮನ್ನು ಮತ್ತು ತಮ್ಮ ಪ್ರೀತಿಪಾತ್ರರ ಚಿತ್ರಗಳನ್ನು ಕ್ಲಾಸಿಕ್ ಮೀಮ್‌ಗಳಾಗಿ ಪರಿವರ್ತಿಸಲು ಜೀಬ್ಲಿಯು ನೆರವಾಗುತ್ತದೆ. ಇದರಲ್ಲಿ ಲಭ್ಯವಿರುವ ಟೆಕ್ಸ್ಟ್ ರೆಂಡರಿಂಗ್, ಟ್ರಾನ್ಸ್‌ಪರೆಂಟ್ ಲೇಯರ್ಸ್, ಕ್ಯಾರೆಕ್ಟರ್ ಕನ್ಸಿಸ್ಟೆನ್ಸಿ ಮತ್ತು ರೀಸ್ಟೈಲಿಂಗ್ ಜೊತೆ ಈ ಹೊಸ ತಂತ್ರಜ್ಞಾನವು ಎಲ್ಲೆಡೆ ಹೆಚ್ಚು ಗಮನಸೆಳೆಯುತ್ತಿದೆ.


ಪೀಟರ್ ಯಾಂಗ್ ಅವರ ಎಕ್ಸ್ ಖಾತೆಯ ಚಿತ್ರ

## ಮಾಹಿತಿ ಸೋರಿಕೆ ಭೀತಿ

ಚಾಟ್‌ಜಿಪಿಟಿ ಸೇರಿದಂತೆ ಇನ್ನೂ ಹಲವಾರು ಎಐಗಳಲ್ಲಿ ಜೀಬ್ಲಿ ಚಿತ್ರಗಳನ್ನು ರಚಿಸಬಹುದು. ಜೀಬ್ಲಿ ರಚಿಸಲು ನಿಮ್ಮ ಫೋಟೊಗಳನ್ನು ಎಐಗಳಿಗೆ ಅಪ್‌ಲೋಡ್ ಮಾಡುವ ಮುನ್ನ ಎಚ್ಚರವಿರಲಿ. ಯಾಕೆಂದರೆ ನಂಬಿಕರ್ಹವಲ್ಲದ ಎಐಗಳಿಗೆ ನಿಮ್ಮ ಚಿತ್ರಗಳನ್ನು ಅಪ್‌ಲೋಡ್ ಮಾಡಿದ್ದಲ್ಲಿ ಅವು ಸೈಬರ್ ಖದೀಮರ ಕೈಸೇರುವ ಸಾಧ್ಯತೆ ಇದೆ. ಹೀಗಾಗಿ, ಅಧಿಕೃತ ಎಐಗಳಲ್ಲಿ ಮಾತ್ರ ಜೀಬ್ಲಿ ಪ್ರಯತ್ನಿಸುವುದು ಒಳಿತು.

## ಮೋದಿ ಮೆಚ್ಚಿದ ಜೀಬ್ಲಿ

ಕೇಂದ್ರ ಸರ್ಕಾರವು ಪ್ರಧಾನಿ ನರೇಂದ್ರ ಮೋದಿ ಅವರ ಜೀಬ್ಲಿ ಶೈಲಿಯ ಭಾವಚಿತ್ರಗಳ ಸರಣಿಯನ್ನು ಈಚೆಗೆ ಬಿಡುಗಡೆ ಮಾಡಿ, ಟ್ರೆಂಡ್‌ಗೆ ಕೈಜೋಡಿಸಿತ್ತು. ಮೋದಿ ಅವರ 12 ಜೀಬ್ಲಿ ಚಿತ್ರಗಳು ವೈರಲ್ ಆಗುತ್ತಿದ್ದು, 'ಸೆಂಗೋಲ್'ನೊಂದಿಗೆ ಮತ್ತು ತ್ರಿವರ್ಣ ಧ್ವಜದೊಂದಿಗೆ ಮೋದಿ ಇರುವ ಚಿತ್ರಗಳು ಆಕರ್ಷಕವಾಗಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗಿನ ಮೋದಿ ಅವರ ಜೀಬ್ಲಿಗಳು ಇವೆ.

### ಜೀಬ್ಲಿ ರೂಪುಗೊಂಡ ಬಗೆ

ಸ್ಟುಡಿಯೊ ಜೀಬ್ಲಿ 1985ರಲ್ಲಿ ಜಪಾನ್‌ನ ಟೋಕಿಯೊದಲ್ಲಿ ಸ್ಥಾಪಿತವಾಯಿತು. ಇದರ ಸಂಸ್ಥಾಪಕರು ಸಿನಿಮಾ ನಿರ್ದೇಶಕ ಹಾಗೂ ಕಲಾವಿದರಾದ ಹಯಾವೊ ಮಿಯಾಜಾಕಿ. ಇವರ ಪ್ರಯತ್ನಕ್ಕೆ ಸಿನಿಮಾ ನಿರ್ದೇಶಕ ಇಸಾವೊ ತಕಹತ ಮತ್ತು ನಿರ್ಮಾಪಕ ತೊಶಿಯೊ ಸುಜುಕಿ ಕೈಜೋಡಿಸಿದ್ದರು. ಕೈಬರಹದ ಅನಿಮೇಷನ್ ಚಿತ್ರಗಳಿಗೆ ಈ ಸ್ಟುಡಿಯೊ ಹೆಚ್ಚು ಪ್ರಖ್ಯಾತಿಗೊಂಡಿತ್ತು.

## ಜೀಬ್ಲಿ ರಚಿಸುವುದು ಹೇಗೆ?

- **chat.openai.com**ಗೆ ಭೇಟಿ ನೀಡಿ, ಓಪನ್‌ಎಐ ಖಾತೆಗೆ ಲಾಗಿನ್ ಆಗಬೇಕು.
- ಚಾಟ್‌ಜಿಪಿಟಿಯ 'ಜಿಪಿಟಿ 4ಒ' ಮಾಡೆಲ್ ಆಯ್ಕೆ ಮಾಡಿಕೊಳ್ಳಬೇಕು. ಈ ಮಾಡೆಲ್‌ನಲ್ಲಿ ಮಾತ್ರ ಜೀಬ್ಲಿ ಚಿತ್ರಗಳನ್ನು ರಚಿಸಲು ಸಾಧ್ಯ.
- ನಂತರ, ಹೊಸ ಚಾಟ್ ಬಟನ್ ಕ್ಲಿಕ್ ಮಾಡುವ ಮೂಲಕ ಹೊಸ ಸಂಭಾಷಣೆ ಪ್ರಾರಂಭಿಸಬೇಕು.
- ಚಾಟ್‌ಬಾಟ್‌ಗೆ ನೇರವಾಗಿ ನಿಮ್ಮ ಇಮೇಜ್ ಡ್ರ್ಯಾಗ್ ಮಾಡಿ, ಅದನ್ನು ನಿಮಗೆ ಅಗತ್ಯವಿರುವ ವಿಧಾನದಲ್ಲಿ, ಶೈಲಿಯಲ್ಲಿ ಜೀಬ್ಲಿಯಾಗಿ ಪರಿವರ್ತಿಸುವಂತೆ ಟೆಕ್ಸ್ಟ್ ನಮೂದಿಸಬಹುದು. ಅಥವಾ ನಿಮಗೆ ಅಗತ್ಯವಿರುವಂತೆ ಜೀಬ್ಲಿ ರಚಿಸುವಂತೆ ಟೆಕ್ಸ್ಟ್ ಪ್ರಾಂಪ್ಟ್ ಒದಗಿಸಬಹುದು.
- ಇದಕ್ಕಾಗಿ ನೀವು 'ಟರ್ನ್ ದಿಸ್ ಫೋಟೊ ಇನ್‌ಟೂ ಎ ಜೀಬ್ಲಿ–ಸ್ಟೈಲ್ ಅನಿಮೆಟೆಡ್ ಪೋಟ್ರೇಟ್ ವಿತ್ ಸಾಫ್ಟ್ ಕಲರ್ಸ್, ಎಕ್ಸ್‌ಪ್ರೆಸಿವ್ ಫೀಚರ್ಸ್ ಆ್ಯಂಡ್ ಎ ಡ್ರೀಮಿ ಬ್ಯಾಕ್‌ಗ್ರೌಂಡ್' ಅಥವಾ 'ಶೋ ಮಿ ಇನ್ ಸ್ಟುಡಿಯೊ ಜೀಬ್ಲಿ ಸ್ಟೈಲ್' ಎಂಬ ಪ್ರಾಂಪ್ಟ್ ಬಳಸಬಹುದು.
- ಇದಾದ ನಂತರ ಎಂಟರ್ ಒತ್ತಿದರೆ ಕೆಲವೇ ಕ್ಷಣಗಳಲ್ಲಿ ಚಾಟ್‌ಜಿಪಿಟಿಯು ನಿಮ್ಮ ಬೇಡಿಕೆಗೆ ಅನುಗುಣವಾದ ಜೀಬ್ಲಿ ರಚಿಸುತ್ತದೆ.
- ರಚಿಸಿದ ಚಿತ್ರದಲ್ಲಿ ಸುಧಾರಣೆಗಳನ್ನೂ ಮಾಡುವಂತೆ ಚಾಟ್‌ಜಿಪಿಟಿಯನ್ನು ಕೋರಬಹುದು.
- ಜೀಬ್ಲಿ ರಚನೆಗೊಂಡ ಬಳಿಕ ಅದರ ಮೇಲೆ ಕ್ಲಿಕ್ ಮಾಡಿ ಡೌನ್‌ಲೋಡ್ ಮಾಡಬಹುದು. ನಂತರ ಅದನ್ನು ಸಾಮಾಜಿಕ ಜಾಲತಾಣಗಳು ಸೇರಿದಂತೆ ಎಲ್ಲೆಡೆ ಹಂಚಿಕೊಳ್ಳಬಹುದು. ■